2) 1999-2000 ರವರೆಗಿನ ಬಾಕಿ ಕರ ನಿರ್ಧರಣೆಗಳನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ವರ್ತಕರು ಸಲ್ಲಿಸುವ ವಾರ್ಷಿಕ ವಹಿವಾಟು ವರದಿಯನ್ನು ಒಪ್ಪಿಕೊಳ್ಳುವ ಕ್ರಮ ಜಾರಿಗೊಳಿಸಲಾಗಿದೆ.

3) 2000-01ನೇ ಸಾಲಿನ ಕರ ನಿರ್ಧರಣೆ ಬಗ್ಗೆ ಸ್ವಯಂ ಕರನಿರ್ಧರಣೆ ಮತ್ತು ಸಾರಾಂಶ (ಸಮರಿ) ಪದ್ಧತಿಯನ್ನು ಜಾರಿ ಮಾಡಲಾಗಿದೆ.

4) ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಜಾರಿ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಮೌಲ್ಯವರ್ಧಿತ ತೆರಿಗೆ ಪದ್ಧತಿಯ ಅನುಷ್ಠಾನಕ್ಕಾಗಿ ಪ್ರತ್ಯೇಕ ಘಟಕವನ್ನು ಸ್ಥಾಪಿಸಲಾಗಿದೆ. ಈ ಬಗ್ಗೆ ಸಿದ್ಧತೆಗಳನ್ನು ಮಾಡುವ ದಿಸೆಯಲ್ಲಿ ಪರಿಣತ ಸಲಹೆಗಾರರನ್ನು ನೇಮಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

1) ಮುಂದಿನ ಆರ್ಥಿಕ ವರ್ಷದಲ್ಲಿ ಈಗಿರುವ ಮಾರಾಟ ತೆರಿಗೆ ಪದ್ಧತಿಯ ಬದಲಿಗೆ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಜಾರಿ ಮಾಡುವ ಮೂಲಕ ತೆರಿಗೆ ಪದ್ಧತಿಯ ಸರಳೀಕರಣ ಮಾಡಲು ಸರ್ಕಾರ ಉದ್ದೇಶಿಸಿದೆ.

2) ಈ ಬಗ್ಗೆ ವಾಮಿಜ್ಯ ತೆರಿಗೆ ಇಲಾಖೆ, ಕೈಗಾರಿಕಾ ಮತ್ತು ವಾಣಿಜ್ಯ ವಲಯವನ್ನು ಸಜ್ಜುಗೊಳಿಸಲು ಮತ್ತು ಹೊಸ ತೆರಿಗೆ ಪದ್ಧತಿಯ ಬಗ್ಗೆ ಸೂಕ್ತ ಕಾಯ್ದೆ ನಿಯಮಗಳನ್ನು ತರುವ ಸಿದ್ಧತೆಗಳನ್ನು ಮಾಡುವ ದಿಸೆಯಲ್ಲಿ ಪರಿಣತ ಸಲಹೆಗಾರರನ್ನು ನೇಮಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಪುತ್ತೂರು ತಾಲ್ಲೂಕಿನ ನೆಟ್ಟಮಡ್ಡೂರು ಗ್ರಾಮದಲ್ಲಿ ವಿದ್ಯುತ್ ಪರಿವರ್ತನಾ ಕಾಮಗಾರಿ.

2424(2865) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) :— ಮಾನ್ಯ ಇಂದನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪುತ್ತೂರು ವಿಧಾನ ಸಭಾ ಕ್ಷೇತ್ರದ ನೆಟ್ಟಮಡ್ಡೂರು ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 220 ಕೆ.ವಿ. ವಿದ್ಯುತ್ ಪರಿವರ್ತಕ ಕಾಮಗಾರಿ ಪೂರ್ತಿಯಾಗಿ ಕಾರ್ಯಾಚರಿಸಲು ಆರಂಭವಾಗಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿ ಪೂರ್ತಿಯಾಗುವುದು;

ಇ) ಹಿಂದಿನ ಸಾಲಿನಲ್ಲಿ ಮಂಜೂರಾದ ಉಪಗ್ರಾಮ (ಹ್ಯಾಮ್ಲೆಟ್) ವಿದ್ಯುತ್ ಕಾಮಗಾರಿಯು ಪೂರ್ತಿಯಾಗಿ ಅನುಷ್ಠಾನಗೊಳಿಸಲಾಗಿದೆಯೇ;

ಈ) 2001-2002ನೇ ಸಾಲಿನಲ್ಲಿ ಹ್ಯಾಮ್ಲೆಟ್ ಯೋಜನೆಯಲ್ಲಿ ಹರಿಜನ ಕಾಲೋನಿ ಮತ್ತು ಗಿರಿಜನ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ ಪ್ರಸ್ತಾವ ಸರ್ಕಾರದಿಂದ ಮಂಜೂರಾತಿಯಾಗಿದೆಯೇ ;

ಉ) ಮಂಜೂರಾಗಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭವಾಗಿದೆ?

ಶ್ರೀ ವೀರಕುಮಾರ ಅ. ಪಾಟೀಲ್ (ಇಂದನ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಇದು ಇನ್ನೂ ಪ್ರಾಥಮಿಕ ಹಂತದಲ್ಲಿರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವ ಸಮಯದ ಬಗ್ಗೆ ನಿಖರವಾಗಿ ತಿಳಿಸುವುದು ಕಷ್ಟಕರ.

ಇ) ಇಲ್ಲಾ.

ಈ) ಹೌದು

ಉ) ಇನ್ನೂ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ. 'ಟರ್ನ್ ಕೀ' ಆಧಾರದಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ.

ಉಚ್ಚ ನ್ಯಾಯಾಲಯದ ಸಮಾನಾಂತರ ಪೀಠ ರಚನೆ

2426(2857) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಚ್ಚ ನ್ಯಾಯಾಲಯದ ಸಮಾನಾಂತರ ಪೀಠವೊಂದನ್ನು ರಚಿಸುವ ವಿಚಾರದಲ್ಲಿ ಸರ್ಕಾರದ ನಿರ್ಧಾರ ಏನು?

ಆ) ಪೀಠ ಸ್ಥಾಪನೆಗೆ ಸರ್ಕಾರವು ನಿರ್ಧರಿಸಿದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು;

ಇ) ಪೀಠ ಸ್ಥಾಪನೆಗೆ ಸರ್ಕಾರವು ನಿರ್ಧರಿಸಿಲ್ಲವೆಂದಾದಲ್ಲಿ, ಅದಕ್ಕೆ ಕಾರಣಗಳು ಏನು?

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :—

ಅ) ಪೀಠ ರಚಿಸಲು ಸರ್ಕಾರ ನಿರ್ಧರಿಸಿದೆ.

ಆ) ಈ ವಿಷಯದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಮಾನ್ಯ ಮುಖ್ಯ ನ್ಯಾಯಾಧೀಶರ ಶಿಫಾರಸ್ಸು ನಿರೀಕ್ಷಿಸಲಾಗುತ್ತಿದೆ.

ಇ) ಅಂಶ "ಅ" ದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.